Regd No B G 155 Sri (97) 26—5—1965

ಸತ್ಯವಾದಿ

48th Year
Satyavadi
DAILY
MYSORE 4

ಪ್ರಧಾನ ಸಂಪಾದಕರು — ಶ್ರೀ ಕೆ ಸುಬ್ರಹ್ಮಣ್ಯ ಎಂ ಎ ಶುಭ್ರವಾಹನರು ಸಂಪಾದಕರು — ಧರ್ಮಪ್ರಚಾರಿವಾಹಕ ಎಂ ಎಸ್ ಕೃಷ್ಣಂಭಟ್ ಪೈಸೆ

ಎಸ್ಸೆಸ್ಸೆಲ್ಸಿ

ಏಪ್ರಿಲ್ನಲ್ಲಿ ನಡೆದ ಮೇಲ್ಕಂಡ ಪರೀಕ್ಷೆಯ ಫಲಿತಾಂಶ ನಿನ್ನೆ ಪ್ರಕಟವಾಯಿತು ; ಶೇಕಡ 37 8 ಪ್ರಾಪ್ತಾಗಿದ್ದಾರೆ : ಪರೀಕ್ಷೆಗೆ 71765 ಮಂದಿ ಕೂತಿದ್ದು, 27111 ಪ್ರಾಪ್ತಾಗಿದ್ದಾರೆ.

❋

ಆಚರಿಸುವುದಿಲ್ಲ

ತಿರುವನಂತಪುರಂ— ಈ ನಗರಂಕ್ಕೆ ಪಕ್ಕದಲ್ಲಿರುವ, ವಾಮನಪುರಂ ಹೆಸರಿನ ಹತ್ತಿರದಲ್ಲಿರುವ ಕಡಕಾಂಪಳ್ಳಿ ಪಂಚಾಯಿತಿಯು ನೆಹರೂ ದಿನಾಚರಣೆ ನಡೆಸುವುದಿಲ್ಲವೆಂದು ನಿರ್ಧರಿಸಿದೆ.

★

ಮಧ್ಯಸ್ಥಿಕೆಯಿಲ್ಲ

ಕಟ್ಮಂಡು— ಭಾರತ-ಪಾಕಿಸ್ತಾನಗಳ ವ್ಯಾಜ್ಯದಲ್ಲಿ ತಾವು ಮಧ್ಯಸ್ಥಿಕೆ ನಡೆಸುವುದಿಲ್ಲವೆಂದೂ, ಆ ಎರಡು ದೇಶಗಳ ದ್ವಿಪಕ್ಷೀಯ ಪಂಥರಿಸಿಕೊಳ್ಳಬೇಕೆಂದೂ ರಾಜ ನರೇಂದ್ರರು ಹೇಳಿದರು

⛃

ಪ್ರತಿಭಟನಾ

ಬೆಂಗಳೂರು— ಇಲ್ಲಿ ಎ ಐ ಸಿ ಸಿ ನಡೆಯುವ ಕಾಲದಲ್ಲಿ ಬಲ ಕಮ್ಯೂನಿಸ್ಟರು ತಮ್ಮ 7 ಪಾಯಿಂಟು ಕೇಳಿಕೆ ಬಗ್ಗೆ ಪ್ರದರ್ಶನ ನಡೆಸಲಿರುವರು

★

ಜಗ್ ಮೋಹನ್

ಜಯಪುರ— ರಾಜಸ್ಥಾನದ ಪ್ರಸಿದ್ಧ ಪ್ರಖ್ಯಾತ ಮತ್ತು ಉತ್ತಮವಾದ ಜಗ್ ಮೋಹನ್ ಸಾರಾಯಿನ್ನು ವಿದೇಶಗಳಿಗೆ ರಫ್ತುನಾಡಲಾಗುವುದು

❋

ನಾಳೆಯ ಮಹಾಭಾಗ್ಯ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ಯಾಸಿಂಧು
ಪಂಪಕೃಷ್ಣಜೋಯಿಸರಿಂದ

27 ಗುರುವಾರ ಏಕಾದಶಿ ರೇವತಿ

ಇದೆಂತಹ ಹರಕೆ

ತಿರುಪತಿ— ದಕ್ಷಿಣದ ನಾಯಕನೊಬ್ಬನು ಈಚೆಗೆ ತ್ರೀ ವೆಂಕಟೇಶ್ವರಸ್ವಾಮಿಗೆ ಎರಡು ನೀಲಿ ಹಂಳುಗಳನ್ನು ಅರ್ಪಿಸಿದನು : ಇದಕ್ಕೆ 2 ಕೋಟಿ ರೂಗಳಾಗಬಹುದೆಂದು ಆಂಧ್ರ ಮುಖ್ಯಮಂತ್ರಿ ತ್ರೀ ಬ್ರಹ್ಮಾನಂದ ರೆಡ್ಡಿ ಹೇಳಿದ್ದಾರೆ : ಇದನ್ನು ಪರೀಕ್ಷಿಸಿದ ಸಂಘ ಇದು ಬೆಲೆ ಬಾಳುವ ರತ್ನವಲ್ಲವೆಂದಿರುವರು : ಈ ಬಗ್ಗೆ ವಿವಿಧವಿಚಾರ ಸಂಗ್ರಹಿಸಲಾಗುತ್ತಿದೆ

★

ಬೆಂಗಳೂರು— ತ್ಯಾಮಗೊಂಡ. ನಿಜಗಾಲ ರೈಲ್ವೆ ಲಿವಲ್ ಹತ್ತಿರ ಬಂದು ಲಾರಿಯಲ್ಲಿ ಕಡ್ಲೆಕಾಯಿ ಸಿಪ್ಪೆ ಕೆಳಗೆ ಪುಟ್ಟಿಟ್ಟಿದ್ದ ರೂ 1440 ಬೆಲೆಯ 15 ಚೀಲ ಅಕ್ಕಿಯನ್ನು ಪೋಲೀಸರು ವಶಪಡಿಸಿಕೊಂಡರು

❋

ಶಿವಮೊಗ್ಗ— ಮಾರುಕಟ್ಟೆ ಬೆಲೆಗಿಂತ ಹೆಚ್ಚಾದಂದಲ್ಲಿ ಅಕ್ಕಿ ಮಾರಿದ ಒಬ್ಬ ವರ್ತಕನಿಗೆ ರೂ 250 ಜುಲ್ಮಾನೆ ವಿಧಿಸಲಾಯಿತು

❋

ಮದರಾಸು— ವೇಶದ ಆಹಾರ ಪರಿಸ್ಥಿತಿ ಸಾಧಾರಣವಾಗಿ ತೃಪ್ತಿಕರವಾಗಿದೆಯೆಂದು ಆಹಾರ ಮಂತ್ರಿ ಸುಬ್ರಹ್ಮಣ್ಯಂ ಹೇಳಿದರು

ಅಬಿನವ ಬಕಾಸುರ

ಬಾಂಗಕಾಕ್— ಲಾಹುಪುರಿ ಎಂಬ ಗಡಿ ಪಟ್ಟಣದಿಂದ ಬಂದಿರುವ ಒಬ್ಬನು ಅಭಿನವ ಬಕಾಸುರನಾಗಿದ್ದಾನೆ ; 30 ಜನರು ಸೇವಿಸುವಷ್ಟು ಆಹಾರ ಸೇವಿಸುತ್ತಾನೆ ; 5 ಗ್ಯಾಲನ್ ನೀರು ಕುಡಿಯುತ್ತಾನೆ.

ಇಂಗ್ಲೀಷು ಉಳಿದಂತಾಯಿತು !

★

ಲಕ್ಷಕ್ಕೆ

ಮತ್ತೂ ಬಹುಮಾನಗಳು

ಮದರಾಸು— ತೀವ್ರ ಗಾಯಗೊಂಡಿದ್ದ ಇಬ್ಬರನ್ನು ಆಸ್ಪತ್ರೆಗೆ ಸಾಗಿಸಿದ ಕೂಲಿ ಹೆಂಗಸು ಲಕ್ಷ್ಮಿಗೆ ಮತ್ತೂ ಬಹುಮಾನಗಳು ಬರುತ್ತಿವೆ — ಸಮಾಜ ಕಲ್ಯಾಣ ಕಾರ್ಯಕರ್ತರು ರೂ 220 ಶೇಖರಿಸಿ ಕೊಟ್ಟರು : ಲೆದರು ಕಟ್ಟಬ್ಬನವರು ರೂ 51 ಕೊಟ್ಟರು.

⛃

ನೀರಿನ ಅಭಾವ

ನ್ಯೂಯಾರ್ಕ್— ಇಲ್ಲಿ ನೀರಿನ ಅಭಾವ ಹೇಳತೀರದ್ದಾಗಿದೆ.

⛃

ರಕ್ಷಣಾ ವ್ಯವಸ್ಥೆ

ರಾವಲ್ಪಿಂಡಿ — ತನ್ನ ದೇಶದ ಅರ್ಥಿಕ ಅಭಿವೃದ್ಧಿಗಿಂತ ರಕ್ಷಣಾ ವ್ಯವಸ್ಥೆಗೇ ಹೆಚ್ಚು ಖರ್ಚು ಮಾಡಬೇಕಾಗಿದೆಯೆಂದು ಅಧ್ಯಕ್ಷ ಆಯೂಬರು ಹೇಳಿದರು.

ಹುಚ್ಚು ಹಿಡಿದುದರ ಪರಿಣಾಮ

ಪೂನಾ— ಬೀದಿಯಲ್ಲಿ ಹಣ್ಣು ಮಾರುವವನೊಬ್ಬನಿಗೆ ಬಿದ್ದಿಕಟ್ಟಿ ಎಂಬ ಕೈಗಳಲ್ಲಿ ಚೂರಿ ಹಿಡಿದುಕೊಂಡು, 3 ವೃ ಹಿಳೆಯರು, 3 ಪೋಲೀಸು ಪ್ರಾಬೆಗಳು ಮತ್ತು ಮೂವರು ಇತರರನ್ನು ಇರಿದು ಗಾಯಗೊಳಿಸಿದನು ; ಕಡೆಗೂ ಕಷ್ಟದಿಂದ ಬಂಧಿಸಿದರು.

★

ನವದೆಹಲಿ— ಹಿಂದಿಯೇತರ ರಾಜ್ಯಗಳವು ಇಂಗ್ಲೀಷು ಉಪಯೋಗಿಸುವುದನ್ನು ಮುಂದುವರಿಸಲು, ಸಬ್ ಕಮಿಟಿ ಶಿಫಾರಸು ಮಾಡಿರುವ ಅಧಿಕೃತ ಭಾಷಾ ಶಾಸನ ತಿದ್ದುಪಡಿಗೆ ಭಾರತ ಸರ್ಕಾರದ ಅನುಮತಿ ಇದೆ

★

ಪಾಕಿಸ್ತಾನದ ಗೂಢಚಾರಿ ಹುಡುಗಿಯರು

ಜಲಂಧರ— ಪಾಕಿಸ್ತಾನದ ಇಬ್ಬರು ಸುಂದರ ಹುಡುಗಿಯರು ಹಳ್ಳಿ ಹುಡುಗಿಯರಂತೆ ಒಟ್ಟೆ ಧರಿಸಿ ಭಾರತದ ಕಡೆ ಗಡಿಯಲ್ಲಿ ಹುಲ್ಲು ಕಾಯ್ಮುತ್ತಿದ್ದಾಗ ಬಂಧಿಸಲ್ಪಟ್ಟರು ; ಪಂಜಾಬಿನಲ್ಲಿ ಬಹುಮಂದಿ ಪಾಕಿಸ್ತಾನಿ ಗೂಢಚಾರರು ಮುಕ್ತ ಏಜೆಂಟರು ಕಾರ್ಯ ನಡೆಸುತ್ತಿರುವರೆಂದು ಅವರು ತಿಳಿಸಿದರು

★

ನ್ಯೂಯಾರ್ಕ್—ದಕ್ಷಿಣ ಆಫ್ರಿಕಾಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡಲು ಅಮೇರಿಕ ತಿರಸ್ಕರಿಸಿದೆ.

ಳಿ

ಕಲ್ಕತ್ತ— ಗಡಿ ವ್ಯಾಜ್ಯಗಳನ್ನು ವಿಶ್ವ ನ್ಯಾಯಸ್ಥಾನಗಳಲ್ಲಿ ತೀರ್ಮಾನಿಸಿಕೊಳ್ಳಬೇಕೆಂದು ಜಯಪ್ರಕಾಶ ನಾರಾಯಣರ ಅಭಿಪ್ರಾಯವಾಗಿದೆ

⛃

ಸಿಲಾಂಗು— ಪೂರ್ವ ಪಾಕಿಸ್ತಾನದ ಗಡಿಯಲ್ಲಿ ಪಾಕ್ ಸೈನ್ಯ ಶೇಖರಣೆ ಹೆಚ್ಚಾಗಿದೆ ಎಂದು ವರದಿಯಾಗಿದೆ.

❋

ಹೈದರಾಬಾದು— ಅಗ್ನಿ ಅನಾಹುತದಿಂದ ಅವಂಗಿಕ್ಯಾಂಪ್ ಹಳ್ಳಿಯಲ್ಲಿ 109 ಮನೆಗಳು ನಿನ್ನೆ ನಾಶವಾಗಿ, 500 ಜನ ಮನೆ ಮಠಗಳಲ್ಲದವರಾಗಿದ್ದಾರೆ : 4 ಲಕ್ಷ ರೂಗಳ ಆಸ್ತಿ ನಷ್ಟವಾಗಿದೆ.

ಈ

ಶಾಸ್ತ್ರಧರ್ಮ ಪ್ರಚಾರ ಸಭಾ

Sastra Dharma Prachar Sabha

(ಮುಂದುವರಿದುದು)

ಈ ರೀತಿಯಾದ ಬೇರೆಬೇರೆ ಮತಗಳಿಗೆ ಸೇರಿದವರ ಬೋಧನೆ, ಸುಧಾರಕರ ಅಭಿಪ್ರಾಯ, ವಿಜ್ಞಾನಿಗಳ ವಾದಸರಣಿ ಇವುಗಳಿಂದ ಭ್ರಮೆಗೊಂಡ ಸನಾತನಿಯು ಶಾಸ್ತ್ರಗಳಲ್ಲಿ ನಂಬಿಕೆಯನ್ನು ಕಳೆದುಕೊಂಡು, ನಾಸ್ತಿಕತೆ, ಶಾಸ್ತ್ರಗಳಲ್ಲಿ ಅಶ್ರದ್ಧೆ, ಪಶು ಅನಾಚಾರಾದಿಯನ್ನು ನೋಡಿ ಅವುಗಳೇ ಇರಲಾರಂಭಿಸಿದನು :

ಶ್ರೀರಾಮ, ಶ್ರೀಕೃಷ್ಣ, ಮುಂತಾದ ಅವತಾರಗಳನ್ನೆತ್ತಿ ಬೋಧಿಸಿದ ಪರಮಾತ್ಮನ ಮಾತಾಗಲೀ, ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ, ಶ್ರೀ ಮಧ್ವಾಚಾರ್ಯ ಮುಂತಾದ ಆಚಾರ್ಯರ ಮಾತಾಗಲೀ ಇವರಿಗೆ ಬೆಲೆಯೇ ಇಲ್ಲದಂತಾಯಿತು : ಚಲನಚಿತ್ರಗಳು, ಪುಸ್ತಕಗಳು, ಪತ್ರಿಕೆಗಳು, ಭಾಷಣಗಳು ಪ್ರತಿಯೊಂದರಲ್ಲಿಯೂ ಸನಾತನಧರ್ಮವನ್ನು ತೆಗಳುವುದೇ ನಡೆತ್ತೇ ಹೋಯಿತು ಸನಾತನಧರ್ಮವನ್ನು ಬೆಂಬಲಿಸಿ ಯಾರೂ ಕೂಡ ಒಂದು ಮಾತನ್ನೂ ಆಡದಂತಹ ಪರಿಸ್ಥಿತಿ ಒದಗಿತ್ತು ; ಸನಾತನಧರ್ಮಾವಲಂಬಿಗಳಿಗೆ ಧರ್ಮ ಪೂರ್ಣ ನಾಶವಾಗುತ್ತದೋ ಎಂಬ ಭೀತಿ ಆವರಿಸಿತ್ತು.

ಗೀತಾ ॥ ಯದಾಯ ಬಾಹುಧರ್ಮಸ್ಯ ಗ್ಲಾನಿರ್ಭವತಿ ಭಾರತ |
ಅಭ್ಯುತ್ಥಾನಮಧರ್ಮಸ್ಯತದಾತ್ಮಾನಂಸೃಜಾಮ್ಯಹಂ ॥

ಎಂಬುದಾಗಿ ಶ್ರೀ ಕೃಷ್ಣಪರಮಾತ್ಮನು ಅಭಯ ನೀಡಿದ್ದಂತೆ, ಸನಾತನಧರ್ಮಕ್ಕೆ ಒದಗಿದ ಆಘಾತವನ್ನು ನಿವಾರಿಸಲು ಬಂಗಾಳಿಯಾ ಸಾಮಾನ್ಯದ ಹಾಲಿನಾರ್ಹ ಎಂಬ ಗ್ರಾಮದಲ್ಲಿ ಶ್ರೀ ಹರಿಯು ಪ. ಪೂ: ಉಪೇಂದ್ರ ಮೋಹನ ಎಂಬ ಹೆಸರಿನಿಂದ ಅವತಾರ ಮಾಡಿದನು : ಜಗತ್ತಿನಲ್ಲಿರುವ ಮಾನವರು ಮುಕ್ತಿಯನ್ನು ಹೊಂದಬೇಕಾದರೆ ಶಾಸ್ತ್ರಗಳಂತೆ ನಡೆಯಬೇಕು, ಶಾಸ್ತ್ರಗಳು ಪೂರ್ಣ ಸತ್ಯ ಎಂಬ ವಿಷಯವನ್ನು ವಿಶದೀಕರಿಸಿ ಗ್ರಂಥಗಳನ್ನು ರಚಿಸಿದರು. [ಶೇಷ]

ಹೊಸೂರ ಕರೀವ ಸಹ ಅನೆಗಳು

ವುಡ್‌ಲಾಂಡ್ 21-5-65 ರಿಂದ
ಶಿ ನ ಅವೋಘ ಪ್ರಾರಂಭ

ಚಿತ್ತಾಕರ್ಷಕ ಈಸ್ಟ್‌ಮನ್ ಕಲರ್ ಚಿತ್ರ ಪ್ರತಿದಿನ 3 ಪ್ರದರ್ಶನಗಳು

ಜಾನ್‌ವರ್ (ಹಿಂದಿ) Janwar

ಶಮ್ಮಿ ಕಪೂರ್, ರಾಜಶ್ರೀ ಮತ್ತಿತರರ ಸುಪ್ರಸಿದ್ಧ ತಾರೆಯರು ಪಾತ್ರವಹಿಸಿರುವರು

ಸಂಗೀತ- ಶಂಕರ್ ಜೈಕಿಷನ್ ಡೈರೆಕ್ಷನ್- ಬಬ್ಬಿ ಸೋನಿಲ್

ಆಪೆರಾ— 28-5-65 ರಿಂದ

ಅತ್ಯವೋಘ ಕನ್ನಡ ಚಿತ್ರಾರಂಭ — ದಿನ 3 ಆಟಗಳು

ನನ್ನ ಕರ್ತವ್ಯ [ಕನ್ನಡ]

ತಾರಾಗಣ— ಕಲ್ಯಾಣಕುಮಾರ್, ನಾಗೇಂದ್ರರಾವ್, ನರಸಿಂಹರಾಜು, ಚಂದ್ರಬಾಬು, ಸಂಧ್ಯಾ, ಜಯ ಲಲಿತ,

SHAKTI SUDHA

A Superb Tonic

Help The Gorakshana

★

"ಗೋರಕ್ಷಣ"ಕ್ಕೆ ಬೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ್ಗೂ ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶ್ರಾಣಿದಯೆ, ಶಾಖಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ವೈದ್ಯಮಾಸಪತ್ರಿಕೆ.

ವಾರ್ಷಿಕ ಚಂದಾ 50 ನ್ಯೆಸೆ | "ಗೋರಕ್ಷಣ"ಕ್ಕೆ ಲೇಖನಗಳನ್ನೂ | ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Niyata M S Krishna Rao
at the Satyavadi Press, Gamarajapuram Mysore 4